**ಇಂದು ದಿನಾಂಕಃ 27-11-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎನ್.ಹೆಚ್.ಆರ್.ವಕೀಲರಿಂದಃ-**

1 ನೇ ಪ್ರತಿವಾದಿಯ ಮನೆ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಇದೆ ಎಂದರೆ ನನಗೆ ದಿಕ್ಕು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ಮನೆ 1 ನೇ ಪ್ರತಿವಾದಿಯ ಮನೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ಕಾಣಿಸುವ ನಳದ ಪಕ್ಕ ಇರುವ ಮೆಟ್ಟಿಲಿಗೆ 1 ನೇ ಪ್ರತಿವಾದಿಯ ಮನೆ ಮುಗಿಯುತ್ತದೆ ಎಂದರೆ ಸಾಕ್ಷಿ ಮೆಟ್ಟಿಲು ವಾದಿಯ ಸ್ಥಳದಲ್ಲಿ ನಿರ್ಮಾಣಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿರುವ ರಸ್ತೆ ಸರಕಾರಿ ರಸ್ತೆ ಎಂದರೆ ಸರಿ.

ವಾದಿಯ ಮನೆಯ ವೀಸ್ತಿರ್ಣದ ಬಗ್ಗೆ ನಾನು ದಾಖಲೆ ನೋಡಿಲ್ಲ. ವಾದಿಯ ಮನೆ ವೀಸ್ತಿರ್ಣ ನನಗೆ ಗೊತ್ತಿಲ್ಲ. 1 ನೇ ಪ್ರತಿವಾಯದಿ ಮನೆ ಮುಂದೆ ವಾದಿಯ ಬಚ್ಚಲು ನೀರು ಬರುತ್ತವೆ ಎಂದರೆ ಸಾಕ್ಷಿ ಅವರದ್ದು, ಅವರ ಅಣ್ಣನ ಮನೆಯಿಂದ ಮತ್ತ ಇನ್ನೊಬ್ಬರ ಮನೆಯಿಂದ ನೀರು ಬರುತ್ತವೆ ಎಂದು ನುಡಿಯುತ್ತಾರೆ. ಮೆಟ್ಟಿಲು ಕಟ್ಟಿರು ಸ್ಥಳಕ್ಕೂ ಹಾಗೂ ವಾದಿಗೂ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸಾಕ್ಷಿ ವಾದಿಯ

ಜಾಗದಲ್ಲಿ 1 ಮತ್ತು 3 ನೇ ಪ್ರತಿವಾದಿಯರು ಮೆಟ್ಟಿಲು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸ್ಥಳ ವಾದಿಗೆ ಸಂಬಂಧಪಟ್ಟಿದ್ದು ಎಂದು ನಾನು ಯಾವುದೇ ದಾಖಲೆ ನೋಡಿಲ್ಲ. ಸಾಕ್ಷಿ ಮುಂದುವರೆದು ನಾನು ಸಣ್ಣವನಿದ್ದಾಗಿನಿಂದ ಸ್ಥಳವನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಮೊದಲಿನಿಂದ ಸದರಿ ಸ್ಥಳದಿಂದ ಯಾವುದೇ ನಾಲಿ ಇರಲಿಲ್ಲ ಎಂದರೆ ಸಾಕ್ಷಿ ಮೊದಲು ಇತ್ತು ಈಗ ಸೂರಪ್ಪ ಮತ್ತು ಇನ್ನಿತರರು ಈಗ ತಡೆಹಿಡಿದಿದ್ದಾರೆ ಎಂದು ನುಡಿಯುತ್ತಾರೆ. ಸೂರಪ್ಪ ಮತ್ತು ಇನ್ನಿತರರು ನಾಲಿ ತಡೆಹಿಡಿದಿರುವ ಬಗ್ಗೆ ನಾನು ಯಾವುದೇ ದೂರು ಗ್ರಾಮ ಪಂಚಾಯಿತಿಗೆ ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ನಾಲಿಗೆ ಸಂಬಂಧಪಟ್ಟಿ ವ್ಯಕ್ತಿಗಳು ದೂರು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ದೂರನ್ನು ನಾನು ನೋಡಿಲ್ಲ.

ವಾದಿಯ ಮನೆಯ ಬಾಗಿಲು ಮುಂದೆ ಇರುವ ಸ್ಥಳ ಸರಕಾರಿ ಸ್ಥಳ ಆಗಿದೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ಸಹಯ ಮಾಡುತ್ತಿರುವ ಕಾರಣ ಅವನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**